# ನತಾಶಾ ಹತಾಶರಿಗೆ ಸ್ಫೂರ್ತಿ



■ ಪ್ರವೀಣ ಕುಲಕರ್ಣಿ

'ಪ್ರಪಂಚದ ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿನಿ' ಎಂಬ ಗೌರವಕ್ಕೆ ಪಾತ್ರವಾಗಿರುವ ಭಾರತೀಯ–ಅಮೆರಿಕನ್ ಬಾಲಕಿ ನತಾಶಾ ಪೆರಿನಾಯಗಂ ಹೇಳುವ ಮಾತೊಂದನ್ನು ಜಗತ್ತಿನ ಎಲ್ಲ ಅಪ್ಪ–ಅಮ್ಮಂದಿರೂ ಸಾವಧಾನದಿಂದ ಕೇಳಿಸಿಕೊಳ್ಳಬೇಕು. 'ನನ್ನ ಅಪ್ಪ–ಅಮ್ಮ, ಅಭ್ಯಾಸ ಮಾಡುವಂತೆ ಎಂದೆಂದಿಗೂ ನನ್ನ ಮೇಲೆ ಒತ್ತಡ ಹೇರಲಿಲ್ಲ. ಆ ಮೂಲಕ ನನಗೆ ಅತ್ಯುತ್ತಮ ಬೆಂಬಲವನ್ನು ನೀಡಿದರು. ಹೀಗಾಗಿ ಒತ್ತಡ ಮುಕ್ತವಾಗಿ ಓದಲು ನನ್ನಿಂದ ಸಾಧ್ಯವಾಗಿ ಈ ಸಾಧನೆಗೆ ಕಾರಣವಾಯಿತು' ಎಂದು ನತಾಶಾ ಹೇಳುತ್ತಾಳೆ.

ನತಾಶಾಳ ತಂದೆ–ತಾಯಿಯವರದ್ದು ಚೆನ್ನೈ ಮೂಲ. ಸದ್ಯ ಅಮೆರಿಕದ ನ್ಯೂಜರ್ಸಿಯ ಎಂ. ಗಾಡಿನೀರ್ ಮಿಡಲ್ ಸ್ಕೂಲ್‌ನ ವಿದ್ಯಾರ್ಥಿನಿಯಾಗಿರುವ ಆಕೆ, 'ಜಾನ್ಸ್ ಹಾಕಿನ್ಸ್ ಸೆಂಟರ್ ಫಾರ್ ಟ್ಯಾಲೆಂಟೆಡ್ ಯೂತ್' (ಸಿಟಿವೈ) ವತಿಯಿಂದ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಗೌರವಕ್ಕೆ ಪಾತ್ರವಾಗಿದ್ದು ಸಣ್ಣ ಸಾಧನೆಯಲ್ಲ. ಅದೂ ಸತತ ಎರಡನೇ ಬಾರಿಗೆ ಪ್ರಶಸ್ತಿ ಒಲಿದಿದೆ. ನತಾಶಾಗೆ 'ಪ್ರಪಂಚದ ಅತ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿನಿ' ಎಂಬ ಕಿರೀಟ ತೊಡಿಸುವ ಮುನ್ನ ಜಾನ್ಸ್ ಹಾಕಿನ್ಸ್ ಸಂಸ್ಥೆ 76 ದೇಶಗಳ, ಹದಿನೈದು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳ ಸಾಧನೆಯನ್ನು ಮೌಲ್ಯಮಾಪನ ಮಾಡಿತ್ತು.

'ಸಿಟಿವೈ'ಯಿಂದ 2021ರಲ್ಲಿ ಏರ್ಪಡಿಸಲಾಗಿದ್ದ ಸ್ಪರ್ಧೆಯಲ್ಲೂ ನತಾಶಾ ಪ್ರಶಸ್ತಿ ಜಯಿಸಿದ್ದಳು. ಆಗ 19 ಸಾವಿರ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. 'ಸಿಟಿವೈ' ಪಟ್ಟಿಮಾಡಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಲ್ಲಿ ನತಾಶಾ ಮೊದಲ ಸ್ಥಾನದಲ್ಲಿ ವಿರಾಜಮಾನಳಾಗಿದ್ದಾಳೆ. 'ಇದನ್ನು ಮಾಡು' ಇಲ್ಲವೆ 'ಇದನ್ನು ಮಾಡಬೇಡ' ಎಂದು ಪಾಲಕರು ಒತ್ತಡ ಹೇರದಿರುವುದೇ ಮಕ್ಕಳಿಗೆ ನೀಡುವಂತಹ ಅತ್ಯುತ್ತಮ ಬೆಂಬಲ ಎಂದು ಆಕೆ ಖಡಾಖಂಡಿತವಾಗಿ ಹೇಳುತ್ತಾಳೆ.

'ಶಾಲೆಯ ಪಠ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುತ್ತಿದ್ದೆ, ಅಷ್ಟೆ. ಈ ಪರೀಕ್ಷೆಗೆ ಪ್ರತ್ಯೇಕವಾಗಿ ಏನೂ ತಯಾರಿ ಮಾಡಿರಲಿಲ್ಲ. ಫಲಿತಾಂಶದಿಂದ ಉತ್ಸಾಹ ಹೆಚ್ಚಿದೆ. ನಮ್ಮ ನೈಜ ಸಾಮರ್ಥ್ಯವನ್ನು ತಿಳಿಯಲು ಪರೀಕ್ಷೆಗೊಡ್ಡಿಕೊಳ್ಳದೆ ಬೇರೆ ಮಾರ್ಗವೇ ಇಲ್ಲ. ಅಂತಹ ಪರೀಕ್ಷೆ ಎದುರಿಸಲು ನಾವು ಸಿದ್ಧರಾಗಲೇಬೇಕು' ಎಂದು ಆಕೆ ವಿವರಿಸುತ್ತಾಳೆ. ವಾಸ್ತುಶಿಲ್ಪ ಮತ್ತು ವಿಜ್ಞಾನ ಎರಡೂ ನತಾಶಾಳ ನೆಚ್ಚಿನ ವಿಷಯಗಳಂತೆ. ವಾಸ್ತುಶಿಲ್ಪದಲ್ಲಿ ಎಂಜಿನಿಯರಿಂಗ್ ಮಾಡುವ ಅಭಿಲಾಷೆಯೂ ಇದೆ ಎಂದು ತನ್ನ ಮನದಿಂಗಿತವನ್ನು ಆಕೆ ಹೊರಹಾಕುತ್ತಾಳೆ.

ನತಾಶಾಳಿಗೆ ಸಂಗೀತದಲ್ಲೂ ಆಸಕ್ತಿ. ಬಿಡುವಿನ ವೇಳೆಯಲ್ಲಿ ಆಕೆ ಗಿಟಾರ್, ವಯೊಲಿನ್ ಹಾಗೂ ಪಿಯಾನೊ ನುಡಿಸುತ್ತಾಳೆ. ಚಿತ್ರ ಬಿಡಿಸುವುದರಲ್ಲೂ ಒಂದು ಕೈ ನೋಡಿದ್ದಾಳೆ. ಪುಸ್ತಕಗಳನ್ನು ಓದುವುದು ಅವಳ ನೆಚ್ಚಿನ ಹವ್ಯಾಸ. ಇದರ ನಡುವೆಯೂ ಶೈಕ್ಷಣಿಕ ಸಾಧನೆಯಲ್ಲೂ ಆಕೆ ಮುಂದಿದ್ದಾಳೆ. 'ಎಸ್‌ಎಟಿ', 'ಎಸಿಟಿ', ಶಾಲೆ ಮತ್ತು ಕಾಲೇಜು ಸಾಮರ್ಥ್ಯ ಪರೀಕ್ಷೆ ಸೇರಿದಂತೆ ಹಲವು ಸ್ಪರ್ಧೆಗಳಲ್ಲಿ ಆಕೆ ಅದ್ವಿತೀಯ ಸಾಧನೆ ಮೆರೆದಿದ್ದಾಳೆ. 'ನಾನು ಪರೀಕ್ಷೆ ಬರೆಯಬೇಕೋ ಬೇಡವೋ ಎನ್ನುವ ನಿರ್ಧಾರವನ್ನೂ ಅಪ್ಪ–ಅಮ್ಮ ನನಗೇ ಬಿಟ್ಟಿದ್ದರು. ಪ್ರವೇಶಕ್ಕೆ ಅಪ್ಲೈ ಮಾಡುವ ಕೊನೆಯ ದಿನದವರೆಗೆ ನಾನು ತೀರ್ಮಾನ ತೆಗೆದುಕೊಳ್ಳದೆ ಕಾದಿದ್ದೆ. ಕೊನೆಗೆ ಕಳೆದುಕೊಳ್ಳುವುದೇನಿದೆ, ಒಂದು ಕೈ ನೋಡಿಯೇಬಿಡುವಾ ಎಂದು ಅಪ್ಲೈ ಮಾಡಿದೆ...' ಹೀಗೆ ವಿವರಿಸುವಾಗ ನ್ಯೂಜರ್ಸಿಯ ಈ ಪೋರಿ ಆತ್ಮವಿಶ್ವಾಸದ ಪ್ರತೀಕವಾಗಿ ಕಂಗೊಳಿಸುತ್ತಾಳೆ.

'ಪ್ರಶಸ್ತಿಯ ಘೋಷಣೆಯು ಪರೀಕ್ಷೆಯಲ್ಲಿ ಮಾಡಿದ ಸಾಧನೆಯನ್ನು ಗುರ್ತಿಸುವುದಷ್ಟೇ ಅಲ್ಲ. ಹೊಸತನದ ಹುಡುಕಾಟದ ಅವರ ತುಡಿತಕ್ಕೆ ಪ್ರೋತ್ಸಾಹವನ್ನೂ ನೀಡುತ್ತದೆ. ಈ ಯುವ ಸಾಧಕರು ಹೊಂದಿರುವ ಜ್ಞಾನಕ್ಕೆ ನಾವು ನೀಡುವ ಗೌರವವೂ ಇದಾಗಿದೆ' ಎಂದು ಸಿಟಿವೈನ ಕಾರ್ಯನಿರ್ವಾಹಕ ನಿರ್ದೇಶಕಿ ಡಾ. ಆ್ಯಮಿ ಶೆಲ್ಟನ್ ಹೇಳುತ್ತಾರೆ.

'ಯಾವುದೇ ಪರೀಕ್ಷೆಯಲ್ಲಿ ನಮಗೆ ಯಶಸ್ಸು ದೊರೆಯದಿದ್ದಾಗ ನಾವು ಹತಾಶರಾಗುವುದು ಬೇಡ. ನಮ್ಮ ಸಾಮರ್ಥ್ಯ ಏನೆಂಬುದು ಆ ಪರೀಕ್ಷೆಯಿಂದ ಗೊತ್ತಾಗುತ್ತದೆ. ಎಲ್ಲಿ ಕೊರತೆ ಇದೆ ಎನ್ನುವುದೂ ಅರಿವಿಗೆ ಬರುತ್ತದೆ. ನಮ್ಮ ಓದಿನ ತಂತ್ರವನ್ನು ರೂಪಿಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ' ಎಂದು ನತಾಶಾ ವಿವರಿಸುತ್ತಾಳೆ. ಹೌದು, ಹತಾಶರಾದವರಿಗೆಲ್ಲ ಪ್ರೇರಣೆ ನೀಡುವಂತಿದೆ ನತಾಶಾಳ ಸಾಧನೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65